**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ,**

**ಧಾರವಾಡ**

**ಸಿಸಿ ನಂ.1969/2023**

ಪಿರ್ಯಾದುದಾರರು: ಪಿ ಎಸ್ ಐ , ಗ್ರಾಮಿಣ ಪೋಲಿಸ ಠಾಣೆ, ಧಾರವಾಡ.

**ವಿರುದ್ಧ**

ಆರೋಪಿತರು: 1. ಗೋವಿಂದ ನಾರಾಯಣಪ್ಪ ಗುಂಜಿ
ವಯಾ: 53 ವರ್ಷ ಉ: ಕೃಷಿ ಕೆಲಸ
ಸಾ: ಹಳ್ಳಿಗೇರಿ , ಧಾರವಾಡ

**-: ದೋಷಾರೋಪಣೆ :-**

ಶ್ರೀ **ಅಮೋಲ್ ಜಯಕುಮಾರ ಹಿರಿಕುಡೆ,** ನಾಲ್ಕನೇ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ಧಾರವಾಡ, ಆದ ನಾನು, ಆರೋಪಿತರಾದ

1. ಗೋವಿಂದ ನಾರಾಯಣಪ್ಪ ಗುಂಜಿ
ವಯಾ: 53 ವರ್ಷ ಉ: ಕೃಷಿ ಕೆಲಸ
ಸಾ: ಹಳ್ಳಿಗೇರಿ , ಧಾರವಾಡ

ಆದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ ,

ಧಾರವಾಡ ಜಿಲ್ಲಾ ಗ್ರಾಮೀಣ ಪೋಲಿಸ ಠಾಣಾ ಹದ್ದಿಯ ಹಳ್ಳಿಗೇರಿ ಗ್ರಾಮದ ವಿಠಲ ದೇವರ ಗುಡಿ ಕಟ್ಟಿ ಮೇಲೆ ದಿ: 12.12.2022 ರಂದು ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಾದ ಬಸವರಾಜ ರವರ ಜೊತೆ ವಿನಾ: ಕಾರಣ ಜಗಳ ತೆಗೆದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಕಲ್ಲಿನಿಂದ ತಲೆಗೆ ಹಾಗೂ ಕುತ್ತಿಗೆಗೆ ಹೊಡೆದು ರಕ್ತ ಗಾಯಪಡಿಸಿದ್ದು **ಭಾರತೀಯ ದಂಡ ಸಂಹಿತೆ ಕಲಂ.324** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ ಎಂದು ಆಪಾದಿಸಲಾಗಿದೆ**.**

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ1 ರವರ ಜೊತೆ ಜಗಳ ತೆಗೆದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, **ದಂಡ ಸಂಹಿತೆ ಕಲಂ.504** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ ಎಂದು ಆಪಾದಿಸಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ1 ರವರ ಜೊತೆ ಜಗಳ ತೆಗೆದು ಅವರಿಗೆ ಜೀವ ಬೆದರಿಕೆ ಹಾಕಿದ್ದು, **ಭಾರತೀಯ ದಂಡ ಸಂಹಿತೆ ಕಲಂ.506** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ ಎಂದು ಆಪಾದಿಸಲಾಗಿದೆ.

**( ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.)**

ದಿನಾಂಕ 12.12.2023.

ಧಾರವಾಡ.

**( ಅಮೋಲ್ ಜಯಕುಮಾರ ಹಿರಿಕುಡೆ)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ,. ಧಾರವಾಡ.

**-ಃ ಆಪಾದನೆ ಃ-**

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

ದಿನಾಂಕ 12.12.2023.

ಧಾರವಾಡ.

**( ಅಮೋಲ್ ಜಯಕುಮಾರ ಹಿರಿಕುಡೆ)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ,. ಧಾರವಾಡ.